

ಕೆ.ಎಸ್. ಭರತ್‌ರ ವಿಕೆಟ್ ಪಡೆದ ಖುಷಿಯಲ್ಲಿ 'ಗಜಿನಿ' ಉಮ್ರನ್ ಮಲಿಕ್

ತಮ್ಮ ಬದುಕಿನ ಮೊದಲ ಐಪಿಎಲ್ ಪಂದ್ಯ ಆಡುವ ಖುಷಿಯಲ್ಲಿ ಹಿಂದಿನ ದಿನ ರಾತ್ರಿ ಅವರಿಗೆ ನಿದ್ದೆಯೇ ಬಂದಿರಲಿಲ್ಲವಂತೆ. ಮೊದಲ ಬೌಂಡರಿ ಹೊಡೆದಮೇಲಷ್ಟೆ ಇಲ್ಲಿ ಆಡುವುದೇ ಪರಮ ಖುಷಿ ಎನಿಸಿದ್ದು. ಸ್ಕೋರ್ ಬೋರ್ಡ್ ಕಡೆ ಲಕ್ಷ್ಯ ಕೊಡದೆ ಆಡುತ್ತಿದ್ದ ಅವರು ಅರ್ಧಶತಕದ ಗಡಿ ದಾಟಿದ ಮೇಲೆ ಜನರ ಚಪ್ಪಾಳೆಯಿಂದ ತೋಯ್ದು ತೊಪ್ಪೆಯಾದರು. 29 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡ ಸ್ಥಿತಿಯಲ್ಲಿ ಬಂದು 4 ಬೌಂಡರಿ, 3 ಸಿಕ್ಸರ್‌ಗಳು ಸೇರಿದ 54 ರನ್‌ಗಳನ್ನು ಕಡಿಮೆ ಎಸೆತಗಳಲ್ಲಿ ಚೊಚ್ಚಲ ಪಂದ್ಯದಲ್ಲಿ ಕಲೆಹಾಕುವುದು ಎಲ್ಲರಿಗೂ ಸಾಧ್ಯವಿಲ್ಲ. ಬಡೋನಿ ಮನಸ್ಥಿತಿ ಎಷ್ಟು ಗಟ್ಟಿಯಾಗಿದೆ ಎನ್ನುವುದು ಇದರಿಂದ ಅರ್ಥವಾದೀತು.

ಕರ್ನಾಟಕದ ಕೆ.ಎಲ್. ರಾಹುಲ್ ಲಖನೌ ತಂಡದ ನಾಯಕ. ಅವರು ಈ ಚುರುಕು ಹುಡುಗನಿಗೆ 'ಬೇಬಿ ಡಿವಿಲಿಯರ್ಸ್' ಎಂದು ನಾಮಕರಣ ಮಾಡಿದ್ದಾರೆ. 360 ಡಿಗ್ರಿ ಹೊಡೆತಗಳನ್ನು ಹೊಡೆಯಬಲ್ಲ ದೈವಿಕ ಪ್ರತಿಭೆ ಈತ ಎನ್ನುವುದು ನೆಟ್ಸ್ ಅಭ್ಯಾಸದಲ್ಲೇ ಅವರಿಗೆ ಸ್ಪಷ್ಟವಾಗಿದೆ.

ತಂದೆ ವಿವೇಕ್ ಬಡೋನಿ ಸಾಕ್ಷ್ಯಚಿತ್ರಗಳ ತಯಾರಕ. ಉತ್ತರ ದೆಹಲಿಯ ಶಾಲಿಮಾರ್‌ನಲ್ಲಿನ ಮನೆಯ ಮಹಡಿಯ ಮೇಲಿನ ಜಾಗದಲ್ಲಿ ಅವರು ಫೀಲ್ಡರ್‌ಗಳ ಬದಲಿಗೆ ಕಲ್ಲುಗಳನ್ನು ಇಟ್ಟು, ಅವುಗಳ ಮಧ್ಯೆ ಹೊಡೆಯುವಂತೆ ಮಗನನ್ನು ಪ್ರೇರೇಪಿಸಿದವರು. ಆಮೇಲೆ ದೆಹಲಿಯ ಸಾನೆಟ್ ಕ್ಲಬ್‌ನಲ್ಲಿ ಕೋಚ್ ತಾರಕ್‌ಸಿನ್ಹ ಗರಡಿಯಲ್ಲಿ ಆಟವನ್ನು ಗಟ್ಟಿಗೊಳಿಸಿಕೊಂಡರು. ಅತುಲ್ ವಾಸನ್, ಆಶಿಶ್ ನೆಹ್ರಾ ತರಹದ ಆಟಗಾರರಿಗೂ ಮೂಲಪಾಠಗಳನ್ನು ಹೇಳಿಕೊಟ್ಟಿದ್ದವರು ಇದೇ ಕೋಚ್ . ಬಡೋನಿಯ ಬ್ಯಾಟಿಂಗ್ ಪ್ರಚ್ಛನ್ನಶಕ್ತಿಯನ್ನು ಕಂಡವರು ಅವರಿಗೆ ಒಳ್ಳೆಯ ಭವಿಷ್ಯವಿದೆ ಎಂದು ಭಾವಿಸುತ್ತಿದ್ದಾರೆ.


**ಹೊಡಿ–ಬಡಿ ಪ್ರತಿಭೆಗಳು:** ಅಭಿನವ್ ಮನೋಹರ್ ಮತ್ತು ರಾಹುಲ್ ತೆವಾಟಿಯ

ಇದೇ ಐಪಿಎಲ್‌ನಲ್ಲಿ ಪ್ರತಿ ಗಂಟೆಗೆ 150 ಕಿ.ಮೀ. ವೇಗದ ಎಸೆತವೊಂದನ್ನು ಹಾಕಿದ ಉಮ್ರನ್ ಮಲಿಕ್ ಅವರದ್ದು ಇನ್ನೊಂದು ಕಥೆ. 'ಕಾಶ್ಮೀರ್ ಫೈಲ್ಸ್' ಸಿನಿಮಾದ ಕಾರಣ ಸುದ್ದಿಯಲ್ಲಿರುವ ಜಮ್ಮು–ಕಾಶ್ಮೀರದ ಯುವಕ ಕೂಡ ಚಿಕ್ಕಪ್ರಾಯದವರು. 17ನೇ ವಯಸ್ಸಿನವರೆಗೆ ಅವರು ಲೆದರ್ ಬಾಲ್ ಕ್ರಿಕೆಟ್ ಆಡಿದವರೇ ಅಲ್ಲ. ಗಲ್ಲಿ ಕ್ರಿಕೆಟ್‌ನಲ್ಲಿ ಟೆನಿಸ್ ಬಾಲನ್ನು ಹಾಕುತ್ತಿದ್ದ ಪರಮ ವೇಗವೇ ಅವರನ್ನು ಐಪಿಎಲ್ ಫ್ಲ್ಯಾಷ್‌ಲೈಟ್ ಅಡಿಗೆ ತಂದು ನಿಲ್ಲಿಸಿದೆ.

ಉಮ್ರನ್ ತಂದೆ ರಷೀದ್ ಹಣ್ಣಿನ ವ್ಯಾಪಾರಿ. ಮಗ ಓದಿಗಿಂತ ಕ್ರಿಕೆಟ್ಟನ್ನೇ ಹಚ್ಚಿಕೊಂಡಿದ್ದು ಅವರಿಗೆ ತಲೆಬಿಸಿಯಾಗಿತ್ತು. ಪದೇಪದೇ ಓದಿನ ಕಡೆಗೆ ಲಕ್ಷ್ಯ ಕೊಡುವಂತೆ ಬುದ್ಧಿ ಹೇಳುತ್ತಿದ್ದರು. ಉಮ್ರನ್ ಸಿಮೆಂಟ್ ಪಿಚ್ ಮೇಲೆ ಹಾಕುತ್ತಿದ್ದ ವೇಗದ ಎಸೆತಗಳನ್ನು ಗಮನಿಸಿದ ಜಮ್ಮು ಮತ್ತು ಕಾಶ್ಮೀರದ 19 ವರ್ಷದೊಳಗಿನವರ ತಂಡದ ಕೋಚ್ ಅವರನ್ನು ನೆಟ್ಸ್ ಅಭ್ಯಾಸಕ್ಕೆ ಬಳಸಿಕೊಳ್ಳುವ ನಿರ್ಧಾರ ಮಾಡಿದರು. ಅದೇ ತಮ್ಮ ಪ್ರತಿಭೆ ಎಂಥದ್ದೆನ್ನುವುದು ಉಮ್ರನ್‌ಗೆ ಮನವರಿಕೆಯಾಗಲು ಕಾರಣವಾಯಿತು. ಮುಂದೆ ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಕೂಡ ಈ ಯುವಕನನ್ನು ಟ್ವೆಂಟಿ20 ಅಂತರರಾಷ್ಟ್ರೀಯ ವಿಶ್ವಕಪ್‌ಗೆ ಸಿದ್ಧವಾಗುವ ಹಂತದಲ್ಲಿ ನೆಟ್ಸ್ ಅಭ್ಯಾಸಕ್ಕೆಂದು ಕೊಂಡೊಯ್ದದ್ದು ಉಲ್ಲೇಖನಾರ್ಹ.

ಉಮ್ರನ್ ಹೇರ್‌ಕಟ್ ನೋಡಿ ಸ್ಥಳೀಯರು 'ಗಜಿನಿ' ಎಂದೇ ತಮಾಷೆಯಾಗಿ ಕರೆಯುತ್ತಿದ್ದರು. ಕಳೆದ ಐಪಿಎಲ್ ಋತುವಿನಲ್ಲೇ ಅವರು ಸನ್‌ರೈಸರ್ಸ್ ಹೈದರಾಬಾದ್ ತಂಡದ ಪರವಾಗಿ ಆಡಿದ್ದರು. ಮೊದಲ ಪಂದ್ಯದಲ್ಲೇ 150 ಕಿ.ಮೀ.ಗೂ ಹೆಚ್ಚು ವೇಗದ ಎಸೆತವನ್ನು ಹಾಕಿ ಗುರುತುಮೂಡಿಸಿದ್ದರು. ಈ ಋತುವಿನ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್‌ನ ದೇವದತ್ತ ಪಡಿಕ್ಕಲ್ ವಿಕೆಟ್ ಅನ್ನು ಅವರು ಪಡೆದ ಎಸೆತ ಉಮ್ರನ್ ವೇಗ ಹಾಗೂ ಸ್ವಿಂಗ್ ಪ್ರತಿಭೆಗೆ ಕನ್ನಡಿ ಹಿಡಿಯಿತು. ಬರೀ ಮೂರೂವರೆ ವರ್ಷದ ಅವಧಿಯಲ್ಲಿ ಉಮ್ರನ್‌ಗೆ ಕ್ರಿಕೆಟ್ ಹೊಸಜೀವನವನ್ನು ದಕ್ಕಿಸಿಕೊಟ್ಟ ಈ ಪ್ರಕರಣವೇ ರೋಚಕ.

ಇವೆರಡು ಉದಾಹರಣೆಗಳಷ್ಟೆ. ಐಪಿಎಲ್ ಎನ್ನುವುದು ದೇಸಿ ಪ್ರತಿಭೆಗಳು ನಿಕಷಕ್ಕೆ ಒಡ್ಡಿಕೊಳ್ಳಲು ಸಿಕ್ಕಿರುವ ಅತ್ಯುತ್ತಮ ಸಾಣೆ. ಕರ್ನಾಟಕ ತಂಡವು 146 ರನ್‌ಗಳ ಗುರಿ ಬೆನ್ನಟ್ಟಿದ್ದಾಗ 3 ವಿಕೆಟ್‌ಗಳನ್ನು ಬರೀ 34 ರನ್‌ಗಳಿಗೇ ಕಳೆದುಕೊಂಡಿದ್ದ ಪಂದ್ಯವನ್ನು ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಕಂಡಿದ್ದೆವು. ಆಗ ಅಭಿನವ್ ಮನೋಹರ್ ಎಂಬ 27 ವರ್ಷದ ಯುವಕ 49 ಎಸೆತಗಳಲ್ಲಿ 70 ರನ್‌ಗಳನ್ನು ಹೊಡೆದು ಕೊನೆಯ ಓವರ್‌ನಲ್ಲಿ ಗೆಲುವು ದಕ್ಕಿಸಿಕೊಟ್ಟರು. ಈ ಸಲ ಐಪಿಎಲ್‌ನಲ್ಲಿ ಅವರು ಗುಜರಾತ್ ಟೈಟನ್ಸ್ ತಂಡಕ್ಕೆ 2.6 ಕೋಟಿ ರೂಪಾಯಿಗೆ ಬಿಕರಿಯಾಗಲು ಆ ಇನಿಂಗ್ಸ್‌ನ ಕಾಣ್ಕೆ ದೊಡ್ಡದು.

ಅವರಷ್ಟೇ ಅಲ್ಲದೆ ರಾಜಸ್ಥಾನ ರಾಯಲ್ಸ್‌ನ ಯಶಸ್ವಿ ಜೈಸ್ವಾಲ್, ಮುಂಬೈ ಇಂಡಿಯನ್ಸ್‌ನ ಬ್ಯಾಟ್ಸ್‌ಮನ್ ತಿಲಕ್ ವರ್ಮ, ಅದೇ ತಂಡದ ಸ್ಪಿನ್ ಬೌಲಿಂಗ್ ಆಲ್‌ರೌಂಡರ್ ಸಂಜಯ್ ಯಾದವ್, ಕೋಲ್ಕತ್ತ ನೈಟ್‌ರೈಡರ್ಸ್‌ನ ಶೆಲ್ಡನ್ ಜಾಕ್ಸನ್, ಸನ್‌ರೈಸರ್ಸ್ ಹೈದರಾಬಾದ್‌ನ ಸ್ಪಿನ್ನಿಂಗ್ ಆಲ್‌ರೌಂಡರ್ ಅಭಿಷೇಕ್ ಶರ್ಮ, ಚೆನ್ನೈ ಸೂಪರ್‌ಕಿಂಗ್ಸ್‌ನ ವೇಗದ ಬೌಲರ್ ಆಲ್‌ರೌಂಡರ್ ರಾಜ್‌ವರ್ಧನ್ ಹಂಗಾರ್ಗೇಕರ್ ಇವರೆಲ್ಲ ಐಪಿಎಲ್ ಬೆಳಕಿನಲ್ಲಿ ಹೊಳೆಯಬಲ್ಲ ಪ್ರತಿಭೆಗಳು. ಕಳೆದ ಋತುವಿನಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಿಂಚದೇ ಇದ್ದರೂ ಪಂಜಾಬ್ ಕಿಂಗ್ಸ್ ಈಗ ನೆಚ್ಚಿಕೊಂಡಿರುವ ದೈತ್ಯ ದೇಹದ ಶಾರುಖ್ ಖಾನ್ ಈ ಸಲ ಬ್ಯಾಟಿಂಗ್‌ನಲ್ಲಿ ಯಾವ ರೀತಿ ಮೋಡಿ ಮಾಡುವರೋ ಎಂಬ ಕುತೂಹಲವಿದೆ.

ಐಪಿಎಲ್ ಹೀಗೆ ಅನೇಕ ದೇಸಿ ಪ್ರತಿಭೆಗಳನ್ನು ಫ್ಲ್ಯಾಷ್‌ಲೈಟ್ ಅಡಿಗೆ ತಂದು ನಿಲ್ಲಿಸಿದೆ. ನೋಡಲು ಎರಡು ಕಣ್ಣುಗಳು ಸಾಲದು.

**ಪ್ರತಿಕ್ರಿಯಿಸಿ: feedback@sudha.co.in**